O.S. ನಂಬರಃ 48/2014

ಪಿ. ಡಬ್ಲ್ಯೂಃ 1

ದಿಃ 21-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಬಿ ಹೆಚ್ ವಕೀಲರಿಂದಃ</u>

ಪ್ರತಿವಾದಿ ಮಕ್ಕಳು ಪಂಚಾಯಿತಿ ಪರವಾಣಿಗೆ ಮೇರೆಗೆ ಮನೆ ರಿಪೇರಿಗೆ ಮುಂದಾದಾಗ ನಾವು ತಡೆದಿದ್ದೇವು ಎಂದರೆ ಸಾಕ್ಷಿ ಪೊಲೀಸರ ಸಹಾಯದಿಂದ ಅದನ್ನು ನಿಲ್ಲಿಸಿರುತ್ತೇವೆ ಎಂದು ಹೇಳುತ್ತಾರೆ. ಸದರಿ ಪ್ರಕರಣವಾದ ನಂತರ ದಾವಾ ಆಸ್ತಿಯ ಕುರಿತಾಗಿ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿ. ದಾವಾ ಆಸ್ತಿಯ ಕುರಿತಾಗಿ ನನ್ನ ತಂದೆ ಭೂ-ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿದಾಗ 13 ಜನ ಎದುರುದಾರರು ಇದ್ದರು ಎಂದರೆ ನನಗೆ ಮಾಹಿತಿ ಇಲ್ಲ, ಆದರೆ ಇರಬಹುದು ಎಂದು ಹೇಳುತ್ತಾರೆ. ಸದರಿ ಭಾಗವನ್ನು ನ್ಯಾಯಾಲಯದ ಗುರುತಿಗಾಗಿ ನಿಶಿ-3 ಎಂದು ಗುರುತಿಸಲಾಯಿತು. ನನ್ನ ತಂದೆ ನೆಟ್ಟಿರುತ್ತಾನೆ ಎಂದು ಹೇಳುವ ಅಡಿಕೆ, ತೆಂಗು, ಬಾಳೆ ಕ್ಷೇತ್ರದ 4-ಗುಂಟೆ ಭಾಗದ ಕುರಿತು ಈ ದಾವೆಯಲ್ಲಿ ಮಾಗಣಿ ಮಾಡಿದ್ದೇನೆ ಎಂದರೆ ಸರಿ. ನಿಪಿ-15 ರಲ್ಲಿ ನನ್ನ ತಂದೆಯ ಹೊರತಾಗಿ ಬೇರೆ ಯಾವುದೇ ವ್ಯಕ್ತಿಗಳ ಹೆಸರಿಲ್ಲ ಎಂದರೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಿಪಿ-15 ರಲ್ಲಿ 3-ಗುಂಟೆ ಜಾಗೆಯನ್ನು ಬೇರೆಯವರಿಗೂ ಸಹ ಮಂಜೂರಿ ಮಾಡಲಾಗಿದೆ ಎಂದರೆ ಗೊತ್ತಿಲ್ಲ. ನನ್ನ ತಂದೆಗೆ 4-ಗುಂಟೆ ಜಮೀನು ಮಂಜೂರಿ ಮಾಡಿಕೊಳ್ಳುವ ಸಮಯದಲ್ಲಿ ಗ್ರಾಮ ಸಹಾಯಕನಾದ ರಮೇಶ ಸುಬ್ರಾಯ ಆಚಾರಿ ರವರ ಸಹಾಯದಿಂದ 3-ಗುಂಟೆ ಜಮೀನನ್ನು ಸಹ ನಮ್ಮ ಪರವಾಗಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಬೇಕಾದ ಬಾಡಿಗೆ ಕುರಿತಾದ ಕಾಗದ ಪತ್ರಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಮನೆ ನಂ. 86 ಈಗಲೂ ಪ್ರತಿವಾದಿಯರ ಹೆಸರಿನಲ್ಲಿದೆ ಎಂದರೆ ಅದನ್ನು ಸರಿಪಡಿಸಲು ಈ ದಾವೆ ಸಲ್ಲಿಸಲಾಗಿದೆ ಎಂದು ಹೇಳುತ್ತಾರೆ. ಮನೆ ಕರ ಕಟ್ಟುವ ಸಮಯದಲ್ಲಿ ಹಣ ತುಂಬಲು ಹೋದ ವ್ಯಕ್ತಿ ಹೆಸರು ಬರೆಯುತ್ತಾರೆ ಎಂದರೆ ಸರಿ. ಹೊಸದಾಗಿ ಮೀಟರನ್ನು ನನ್ನ ತಂದೆ ಬಾಡಿಗೆ ನೀಡಿದ ಮಾಲೀಕರ ವಿನಂತಿ ಮೇರೆಗೆ ಅಳವಡಿಸಿದ ಕಾರಣ ಹೆಸರು ನಮ್ಮ ತಂದೆಯ ಹೆಸರು ದಾಖಲಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂಬರ ಇಲ್ಲದ ಆಸ್ತಿಯನ್ನು ಸೇರಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಖರೀದಿಸುವ ಪೂರ್ವದಲ್ಲಿ ಮಾಡಿಕೊಳ್ಳುವ ಕರಾರು ಪತ್ರ ನಮ್ಮ ಬಳಿ ಇಲ್ಲ. ನನ್ನ ಪ್ರಮಾಣ ಪತ್ರದಲ್ಲಿಯ ಸಹಿಗೂ ಹಾಗೂ ಹಣ ಮುಟ್ಟಿದ ಪಾವತಿಯಲ್ಲಿಯ ಸಹಿಗೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸಲ್ಲಿಸಿದ ಭಾವಚಿತ್ರಕ್ಕೂ ಹಾಗೂ ಪ್ರಮಾಣ ಪತ್ರದಲ್ಲಿಯ ವಿಷಯಗಳಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ದಾವೆ ಆಸ್ತಿಯ ಕುರಿತಾಗಿ ನಿಪಿ-17 ರ ಸರ್ವೆ ನಂ. 205/6 ರ ಕುರಿತು ತೋರಿಸಿದ ನಕ್ಷೆಯಂತೆ ಮೊದಲು ನಕ್ಷೆ ಇತ್ತು. ದಾವೆ ದಾಖಲಿಸುವ ಪೂರ್ವದಲ್ಲಿ ಸರ್ವೆ ನಂಬರ 205 ರಲ್ಲಿ ಹಿಸ್ಸೆ ನಕ್ಷೆಯಾಗಿತ್ತು ಎಂದರೆ ಸರಿಯಲ್ಲ. 4-ಗುಂಟೆ ಜಾಗೆ ಹಾಗೂ ಅದರಲ್ಲಿಯ ಮನೆ ಕುರಿತು ಈ ದಾವೆಯಲ್ಲಿ ಮಾಗಣೆ ಮಾಡಿದ್ದೇನೆ. ನಿಪಿ-17 ರ ಪ್ರಕಾರ 2-ಗುಂಟೆ ಜಮೀನು ಮಾಲೀಕರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

ದಾವಾ ಜಮೀನಿನ ಮಾಲೀಕರ ಹೆಸರಿನಲ್ಲಿ 2-ಗುಂಟೆ ಜಮೀನಿದ್ದರೂ ಸಹ 4-ಗುಂಟೆಯ ಕುರಿತಾಗಿ ಮಾಗಣೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.